ಫಾರ್ವರ್ ಚಾಲೂ ಮಾಡದೆ, ವ್ಯವಸಾಯಕ್ಕೆ ನೀರು ಕೊಡದೆ ಇವತ್ತು ಲಕ್ಷಾಂತರ ರೂಪಾಯಿ ನಷ್ಟವಾಗಂತ್ತಿದೆ.....

ಶ್ರೀ ಹೆಚ್.ಡಿ. ದೇವೇಗೌಡ –ಅಧಿಕಾರಿಗಳ ಮೇಲೆ ಏನು ಕ್ರಮ ತೆಗೆದುಕೊಳ್ಳಬೇಕೋ ಅದನ್ನು ತೆಗೆದುಕೊಳ್ಳುತ್ತೇನೆ. ಈ ಟ್ರಾನ್ಸ್‌ಫಾರ್ಮರ್‌ನ್ನು ಪರ್ಚೇಸ್ ಮಾಡಿದ್ದು ಈಗ ಹಳೇ ಕತೆ. ಅದನ್ನು ನಾನು ಹೇಳುವುದಕ್ಕೆ ಹೋಗುವುದಿಲ್ಲ. ಆದರೆ ಕಂಟ್ರಾಕ್ಟರ್ ಯಾರು ಸಬ್ ಸ್ಟ್ಯಾಂಡರ್ಡ್ ವೆಂಟೀರಿಯಲ್‌ನ್ನು ಕೊಟ್ಟಿದ್ದಾರೆ ಅವರದ್ದು ತಪ್ಪಾಗಿದೆ. ಆದ್ದರಿಂದಲೇ ಅದನ್ನು ರೀಪ್ಲೇಸ್ ಮಾಡುವುದಕ್ಕೆ ಒಪ್ಪಿದ್ದಾರೆ ನಾವು ಮೊದಲೇ ಕ್ರಮ ತೆಗೆದುಕೊಂಡು ಸರ್ಕಾರಕ್ಕೆ ಆಗುತ್ತಿದ್ದ ನಷ್ಟವನ್ನು ತಪ್ಪಿಸಿದ್ದೇವೆ. ಆದ್ದರಿಂದ ಇದಕ್ಕೆ ತಾವು ಮೆಚ್ಚುಗೆಯನ್ನು ವ್ಯಕ್ತಪಡಿಸಬೇಕು. ಇದನ್ನು ಶೀಘ್ರವಾಗಿ ಚಾಲು ಮಾಡಿಸಿ ಕೊಡುತ್ತೇನೆ. ಆದರೆ ೧ ತಿಂಗಳೊಳಗೆ ಎಂದು ತಾವು ಏನು ಹೇಳಿದಿರಿ ಅದಕ್ಕೆ ನಾನು ಭರವಸೆ ಕೊಡಲು ಸಾಧ್ಯವಿಲ್ಲ. ಒಟ್ಟಿನಲ್ಲಿ ಆದಷ್ಟು ಬೇಗ ಮಾಡಿಸಿಕೊಡುತ್ತೇನೆ.

ಶ್ರೀ ಎಸ್. ಜಿ. ನಂಜಯ್ಯನಮಠ್.– ಅಧಿಕಾರಿಗಳ ಮೇಲೆ ಕ್ರಮ ತೆಗೆದುಕೊಳ್ಳಬೇಕೆಂದು ನನ್ನ ಸೂಚನೆ ಇಲ್ಲ. ಇದನ್ನು ತೀವ್ರವಾಗಿ ಚಾಲು ಮಾಡಿಸಿಕೊಡುತ್ತೇನೆಂದು ತಾವು ಹೇಳಿದ್ದೀರಿ ಸಂತೋಷ.

ಕಾಡಿನಿಂದ ಉರುವಲು ಕಟ್ಟಿಗೆ ತರಲು ಪರವಾನಗಿ ಕೊಡದೇ ಇರುವುದು

೧೨೪೬. ಶ್ರೀ ಎಸ್. ಆರ್. ಲಕ್ಷ್ಮಯ್ಯ (ಬೀರೂರು).—ಮಾನ್ಯ ಅರಣ್ಯ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಜ್ಯದಲ್ಲಿ ರೈತರಿಗೆ, ಕಾಡಿನಿಂದ ಉರುವಲು ಕಟ್ಟಿಗೆ ತರಲು ಪರವಾನಗಿ ಕೊಡದೇ ಇರುವುದರಿಂದ ಉಂಟಾಗಿರುವ ತೊಂದರೆ ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಆ) ಹಾಗಿದ್ದಲ್ಲಿ ಪರವಾನಗಿ ಕೊಡಲು ಸರ್ಕಾರದವರು ಕ್ರಮ ಕೈಗೊಳ್ಳುವರೆ ?

ಶ್ರೀ ಬಿ. ಎ. ಜೀವಿಜಯ (ಅರಣ್ಯ ರಾಜ್ಯ ಮಂತ್ರಿಗಳು).—

ಅ) ಇಲ್ಲ.

ಆ) ಉದ್ಭವಿಸುವುದಿಲ್ಲ.

ಶ್ರೀ ಎಸ್. ಆರ್. ಲಕ್ಷ್ಮಯ್ಯ.—ಮಾನ್ಯ ಅಧ್ಯಕ್ಷರೇ, ಜನಕ್ಕೆ ಕಾಡಿನಿಂದ ಸೌದೆ ಸಿಗದೆ ಬಹಳ ತೊಂದರೆಯಾಗಿದೆ. ಸೌದೆ ಸಿಗಲೆಲ್ಲವೆಂದು ಯಾರು ಅಡಿಗೆ ಮಾಡುವುದನ್ನು ಬಿಟ್ಟಿಲ್ಲ. ಸಾಯಂಕಾಲ ಒಲೆಯನ್ನು ಹಚ್ಚೇ ಹಚ್ಚುತ್ತಾರೆ. ಆದರೆ ಸೌದೆಗೆ ಬಹಳ ಕಷ್ಟ ಬಂದಿದೆ. ಕಾಡಿನಲ್ಲಿ ಒಣಗಿ ಬಿದ್ದಿರುವ ಮರವನ್ನಾದರೂ ಜನರು ತರುವುದಕ್ಕೆ ಪರವಾನಿಗೆಯನ್ನು ಕೊಡಬೇಕು. ಕಟ್ಟಿಗೆ ಇಲ್ಲದೆ ಜನರು ಏನು ಮಾಡಬೇಕು? ದಯವಿಟ್ಟು ಜನರಿಗೆ ಸೌದೆಯನ್ನು ಒದಗಿಸಬೇಕೆಂದು ತಮ್ಮ ಮುಖಾಂತರ ಸಚಿವರಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಬಿ.ಎ. ಜೀವಿಜಯ.—ಅವರೇ ಹೇಳಿರುವ ಪ್ರಕಾರ, ನಾವು ಪರವಾನಿಗೆಯನ್ನು ಕೊಡದಿದ್ದರೂ ಯಾರೂ ಅಡಿಗೆ ಮಾಡುವುದನ್ನು ನಿಲ್ಲಿಸಿಲ್ಲವೆಂದು ಹೇಳಿದ್ದಾರೆ. ಮಾನ್ಯ ಸದಸ್ಯರಿಗೆ ಹೇಳುವುದೇನೆಂದರೆ, ೧೯೭೩ನೇ ಇಸವಿಯಲ್ಲಿ ಕಾಡನ್ನು ರಕ್ಷಣೆ ಮಾಡುವುದಕ್ಕೆ ಕಾನೂನನ್ನು ತಂದಿದ್ದೇವೆ. ಮತ್ತೆ ಹಿಂದಿನ ಪದ್ಧತಿಯನ್ನು ಜಾರಿಗೆ ತಂದರೆ ಅರಣ್ಯ ನೀತಿಯನ್ನು ಉಲ್ಲಂಘಿಸಿದಂತಾಗುತ್ತದೆ. ಇದರ ಬಗ್ಗೆ ಆದೇ ದಿನ ೩ ಘಂಟೆಯಲ್ಲಿ ಕುಳಿತು ಅವರು ಮತ್ತು ನಾವು ಎಲ್ಲರೂ ಮಾತನಾಡಿದ್ದೇವೆ. ಆವರು ಅನೇಕ ಸಲಹೆಗಳನ್ನು ಕೊಟ್ಟಿದ್ದಾರೆ. ಈಗಿರುವ ಸೌದೆ ಸಮಸ್ಯೆಗಳನ್ನು ಬಗೆಹರಿಸಲಿಕ್ಕೆ ಪ್ರಾಮಾಣಿಕ ಪ್ರಯತ್ನ ಮಾಡುತ್ತೇನೆ.